

ವಿವಾಹಬಾಹಿರ ಸಂಬಂಧವಾದರೆ ದಾಂಪತ್ಯವು ಒಡೆದ ಕನ್ನಡಿಯಂತೆ, ಹೌದೆ?

ಡಾ.ವಿನೋದ ಛೆಬ್ಬಿ

# 70: ಮೂರನೆಯವರ ಮೋಹ

ಹೆಣ್ಣುಗಂಡುಗಳ ಸಂಬಂಧ ಸಂಕೀರ್ಣವಾದುದು. ಅದಕ್ಕೆಂದೇ ಹೊಂದಾಣಿಕೆ ಕಠಿಣವಾಗುತ್ತದೆ. ಕೆಲವೊಮ್ಮೆ ಹೊಂದಾಣಿಕೆ ಆಗದಷ್ಟು ಸಂಬಂಧ ಕಠಿಣವಾಗುತ್ತದೆ. ಆಗ ಇಬ್ಬರ ಪೈಕಿ ಒಬ್ಬರು ಮೂರನೆಯವರ ಹತ್ತಿರವಾದಾಗ ಪರಿಣಾಮ ಏನಾಗುತ್ತದೆ ಎಂದು ಈ ಸಲ ನೋಡೋಣ.

ದೃಷ್ಟಾಂತ ಒಂದು: ಮಧ್ಯವಯಸ್ಸಿನ ಹೆಂಡತಿಯನ್ನು ಗಂಡ ಅತ್ಯಂತ ಕಾಳಜಿಪೂರ್ವಕ ಕರೆತರುತ್ತಾನೆ. ಆಕೆ ದಿಕ್ಕುತೋಚದಂತೆ ಮಂಕಾಗಿ ಕುಳಿತಿರುವಾಗ ಅವಳ ಸ್ಥಿತಿಯನ್ನು ವಿವರಿಸುತ್ತಾನೆ. ಆಕೆಗೆ ಡಿಪ್ರೆಶನ್ ಇದೆಯೆಂದು, ಮಾತ್ರೆಗಳನ್ನು ತೆಗೆದುಕೊಂಡರೂ ಸುಧಾರಣೆ ಆಗಿಲ್ಲವೆಂದು ಮನೋಚಿಕಿತ್ಸೆಗಾಗಿ ನನ್ನಲ್ಲಿ ಕರೆದುಕೊಂಡು ಬಂದಿದ್ದಾನಂತೆ. ಆಕೆ ಏನೋ ಹೇಳಲೆಂದು ಬಾಯಿ ತೆರೆಯುವಾಗ ನಡುವೆ ಪ್ರವೇಶಿಸಿ, ಅವಳ ಪರವಾಗಿ ತಾನೇ ವಿವರಿಸುತ್ತಾನೆ. ಸಂಗಾತಿಯ ಪ್ರತಿಸಂಜ್ಞೆಗೂ ಇಷ್ಟೊಂದು ಮಹತ್ವ ನೀಡುವ, ಆದರೆ ಆಕೆಯನ್ನು ಮಾತಾಡಗೊಡಿಸದಿರುವ ಇವನ ಅತಿವಿನಯದ ವರ್ತನೆಯಲ್ಲಿ ಕೃತಕತೆ ಎದ್ದುಕಾಣುತ್ತಿದೆ. ಆಕೆಯೋ ಗಂಡನ ಉಪಚಾರವನ್ನು ಗಮನಿಸದೆ ಕಳೆದುಹೋದಂತಿದ್ದಾಳೆ. ಹೀಗೆ ಸಂತೃಪ್ತಳಾಗಿ, ವಿರಕ್ತಳಾಗಿ ಇರುವುದಕ್ಕೆ ಕಾರಣ ತಿಳಿಯಲು ಹೆಚ್ಚು ಹೊತ್ತು ಬೇಕಾಗುವುದಿಲ್ಲ. ಆತನನ್ನು ಹೊರಗೆ ಕಳಿಸಿ ಆಕೆ ಹೇಳುತ್ತಾಳೆ: ತನ್ನ ಗಂಡ ಕೆಲಸದವಳೊಂದಿಗೆ ಸಂಬಂಧ ಇಟ್ಟುಕೊಂಡಿದ್ದಾನೆ. ಆಕೆಗೆ ಗೊತ್ತಾಗಿ ಪ್ರಶ್ನಿಸಿದಾಗ ಸಾರಾಸಗಟಾಗಿ ಅಲ್ಲಗಳೆದಿದ್ದಾನೆ. ಗಟ್ಟಿಯಾದ ಆಧಾರ ಸಿಕ್ಕಾಗ ತಕ್ಷಣ ಕ್ಷಮೆಕೇಳಿ, ಇನ್ನೊಂದು ಸಲ ಮಾಡುವುದಿಲ್ಲವೆಂದು ಮಾತುಕೊಟ್ಟು ಅದನ್ನೆಲ್ಲ 'ಮರೆತುಬಿಡಲು' ಹೇಳಿದ್ದಾನೆ. ಆಕೆಯ ಮನಸ್ಥಿತಿ ಅಸ್ತವ್ಯಸ್ತವಾಗಿ ಆಕೆ ಮೂಲೆಗುಂಪಾಗಿ ಕುಟುಂಬದ ವ್ಯವಸ್ಥೆ ಕುಸಿಯುವಂತಾದಾಗ ಗಾಬರಿಯಾಗಿ ಸಹಾಯ ಬಯಸಿ ಬಂದಿದ್ದಾನೆ.

ದೃಷ್ಟಾಂತ ಎರಡು: ಇವರ ಹತ್ತು ವರ್ಷದ ದಾಂಪತ್ಯ ಒಂದುರೀತಿಯ ಹೊಂದಾಣಿಕೆಯಿಂದ ನಡೆದಿದೆ. ಇತ್ತೀಚೆಗೆ ಹೆಂಡತಿ ನೆರೆಯವನನ್ನು ಪ್ರೀತಿಸಿದ್ದಾಳೆ. ಶರೀರ ಸಂಪರ್ಕವಿಲ್ಲದಿದ್ದರೂ ಬಿಟ್ಟಿರಲಾರದ ಭಾವನಾತ್ಮಕ ಬಾಂಧವ್ಯ ಬೆಳೆದಿದೆ. ವಿಷಯ ಬಹಿರಂಗವಾದಾಗ ಪ್ರೇಮಿಯನ್ನು ಬಿಡುವುದಕ್ಕಿಂತ ಸಾವೇ ಮಿಗಿಲೆಂದು ವಿಷವುಂಡು ಆಸ್ಪತ್ರೆ ಸೇರಿದ್ದಾಳೆ. ಈ ಒತ್ತಡ ತಡೆಯಲಾಗದೆ ಆಕೆಯ ಪ್ರೇಮಿ ಆಸ್ಪತ್ರೆಗೆ ಬಂದು ವಿದಾಯ ಹೇಳಿ ದೂರವಾಗಿದ್ದಾನೆ. ಈಗ ಗಂಡಹೆಂಡತಿ ನನ್ನ ಮುಂದೆ ಮುಖ ಬಾಡಿಸಿಕೊಂಡು ಕುಳಿತಿದ್ದಾರೆ. ಹೆಂಡತಿಯ ಈ ನಡತೆಯು ತನ್ನ ದುರ್ಬಲ ಮಗ್ಗುಲನ್ನು ಎತ್ತಿತೋರಿಸಿದಾಗ ಗಂಡ ಅಸ್ತಿತ್ವ ಕಳೆದುಕೊಂಡು ಹಿಡಿಯಷ್ಟಾಗಿದ್ದಾನೆ. ಪ್ರೇಮಿಯಿಲ್ಲದೆ ಬದುಕೆಲ್ಲ ಒಂಟಿಯಾಗಿ ಕಳೆಯುವುದು ಹೇಗೆಂದು ಹೆಂಡತಿ ದುಃಖತಪ್ತಳಾಗಿದ್ದಾಳೆ.

ದೃಷ್ಟಾಂತ ಮೂರು: ಇವನದು ಧಾರ್ಮಿಕ ಹಿನ್ನೆಲೆಯುಳ್ಳ ಮನೆತನ. ಅತ್ಯಂತ ಸರಳ ಸಾತ್ವಿಕ ಸರ್ವಗುಣ ಸಂಪನ್ನ ಸುಂದರಿಯೊಡನೆ ಸಂಸಾರ ಮಾಡಿಕೊಂಡಿದ್ದಾನೆ. ಆಗೊಬ್ಬಳು ಇವನನ್ನು ಬಯಸಿ ಬಂದಿದ್ದಾಳೆ. ಇವನು ಆಕರ್ಷಣೆಗೊಂಡು ಆಕೆಯ ಹಿಂದೆ ಬಿದ್ದು ಒಂದುರೀತಿ ದೇಹಸುಖ ಪಡೆದಿದ್ದಾನೆ. ಅವಳ ಕೋರಿಕೆಗಳನ್ನು ಪೂರೈಸಲು ಸಾಕಷ್ಟು ಖರ್ಚುಮಾಡಿದ್ದಾನೆ. ಅಷ್ಟರಲ್ಲಿ ಆಕೆ ಇನ್ನೊಬ್ಬನೊಡನೆ ಮಲಗಿದ್ದನ್ನು ಕಣ್ಣಾರೆ ಕಂಡು ಆಘಾತ, ಭ್ರಮನಿರಸನ ಆಗಿದೆ. 'ಅಮೃತ ಕೈಯಲ್ಲಿದ್ದರೂ ಕೊಳಚೆ ನೀರಿಗೆ ಹೋದ' ತನ್ನ ಬಯಕೆಯ ಬಗೆಗೆ ಜಿಗುಪ್ಸೆ, ಪಾಪಪ್ರಜ್ಞೆ ಕಾಡುತ್ತ ಆತ್ಮಹೀನನಾಗಿದ್ದಾನೆ. ಪ್ರೇಯಸಿಯನ್ನು ಮನಸ್ಸಿನಿಂದ ಕಿತ್ತೊಗೆಯಲೇಬೇಕೆಂದು ಮನಸ್ಸುಮಾಡಿ ನನ್ನ ಸಲಹೆ ಕೇಳಿದ್ದಾನೆ.

ದೃಷ್ಟಾಂತ ನಾಲ್ಕು: ಇದು ಐದು ವರ್ಷಗಳ ಹಿಂದಿನ ಕತೆ. ಈ ಮಧ್ಯಮವಯಸ್ಸಿನ ಮಹಿಳೆಗೆ ಪ್ರೇಮವಿವಾಹವಾಗಿ ಮೂರು ದಶಕಗಳ ಮೇಲಾಗಿದೆ. ಗಂಡಹೆಂಡಿರ ನಡುವೆ ಅಪರೂಪ ಎನ್ನುವಷ್ಟು ಹೊಂದಾಣಿಕೆಯಿದೆ. ಈಕೆ ಗಂಡನನ್ನು ಅರ್ಥಮಾಡಿಕೊಂಡು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾಳೆ. ಆದರೆ ಕಾಮಕೂಟದಲ್ಲಿ ಒಂದೇ ಒಂದು ಸಲವಾದರೂ ತೃಪ್ತಿ ಎನ್ನುವುದಿರಲಿ ಉತ್ಕಟತೆಯೇ ಉಂಟಾಗಿಲ್ಲ. ಹಾಗಾಗಿ, ಅಗತ್ಯವಾದಾಗ ಒಬ್ಬಳೇ ಸುಖಿಸುತ್ತಾಳೆ. ಕೆಲವು ವರ್ಷಗಳ ಹಿಂದೆ ಗಂಡನಿಗೆ ಹೇಳಿಕೊಂಡಾಗ ಆತ ಮುಖ ಚಿಕ್ಕದು ಮಾಡಿಕೊಂಡನಂತೆ. ಆಗಿನಿಂದ ಕ್ರಿಯೆ ಮುಗಿದ ನಂತರ ತೃಪ್ತಿಯಾಯಿತಾ ಎಂದು ಆಗಾಗ ಕೇಳುತ್ತಿರುತ್ತಾನೆ. ಆಗೆಲ್ಲ ಪ್ರತಿಕ್ರಿಯೆ ತೋರದೆ ಮೌನವಾಗಿರುತ್ತಾಳೆ. ಯಾಕೆ? ಇಲ್ಲವೆಂದು ಪ್ರಕಟಪಡಿಸಿದರೆ ಆತನೆಲ್ಲಿ ಬೇಜಾರು ಪಟ್ಟುಕೊಳ್ಳುವನೋ ಎಂದು ಆತಂಕ ಈಕೆಗೆ. (ಮೌನದಿಂದಿದ್ದು ಏನು ಸಂದೇಶ ಕೊಡಬೇಕೆಂದು ಅಂದುಕೊಂಡಿದ್ದಾಳೆಂದು ವಿಚಾರಿಸಿದರೆ ಸ್ಪಷ್ಟ ಉತ್ತರವಿಲ್ಲ.) ಇತ್ತೀಚೆಗೆ ಒಬ್ಬ ಗಂಡಸಿನ ಪರಿಚಯವಾಗಿ ಶರೀರ ಸಂಪರ್ಕ ನಡೆಯುತ್ತಿದೆ. ಇವಳಿಗೆ ಕಾಮತೃಪ್ತಿ ಆಗದಿದ್ದರೂ ಉತ್ಕಟತೆ, ಮೈನವಿರೇಳುವ ಅನುಭವವಂತೂ ಆಗಿದೆ. ಗಂಡನಿಗೆ ಇದನ್ನು ಪ್ರಕಟಪಡಿಸಬೇಕೆಂದು ನಿರ್ಧರಿಸಿದ್ದಾಳೆ. ಆಗ ಗಂಡ ದುಃಖಿತನಾದರೆ, ವ್ಯಗ್ರನಾದರೆ ನಿರ್ವಹಿಸಲು ನನ್ನ ಸಹಾಯ ಬೇಕೆ? ಅದಲ್ಲ. ಅವನ ಭಾವನಾತ್ಮಕ ಬಿರುಗಾಳಿಯನ್ನು ಎದುರಿಸುವ, ತಣ್ಣಗಾಗಿಸುವ ಸಾಮರ್ಥ್ಯ ಈಕೆಗಿದೆ. ತನ್ನ ಸಂಬಂಧವನ್ನು ಮುಂದುವರಿಸುವುದಕ್ಕಾಗಿ ಗಂಡನನ್ನು ಒಪ್ಪಿಸುವುದನ್ನು ಹೇಳಿಕೊಳ್ಳಲು ನನ್ನನ್ನು ಭೇಟಿಯಾಗಿದ್ದಾಳೆ.

ಮೇಲಿನ ದೃಷ್ಟಾಂತಗಳಲ್ಲೆಲ್ಲ ಒಂದು ಸಾಮಾನ್ಯ ಅಂಶವಿದೆ: ಸಂಗಾತಿಗಳಲ್ಲಿ ಒಬ್ಬರು ಮೂರನೆಯವರ ಜೊತೆಗೆ ಸಂಬಂಧ ಇಟ್ಟುಕೊಂಡಿದ್ದಾರೆ. ಇದಕ್ಕೆ ವಿವಾಹಬಾಹಿರ ಸಂಬಂಧ ಎನ್ನಬಹುದು ಆದರೆ ಹಾಗೆನ್ನಲು ಒಂದಂಶ ಅಡ್ಡಿಯಾಗಿದೆ. ಅದೇನೆಂದು ತಿಳಿಯುವುದಕ್ಕಾಗಿ ಈ ಪ್ರಸಂಗಗಳನ್ನು ಗಮನಿಸಿ:

ದೃಷ್ಟಾಂತ ಐದು: ಇವರಿಬ್ಬರೂ ಕಾಲೇಜು ಪ್ರೇಮಿಗಳು. ನಾಲ್ಕು ವರ್ಷಗಳಿಂದ ಪರಸ್ಪರ ಬದ್ಧರಾಗಿದ್ದು ಸಾಕಷ್ಟು ಸಲ ಶರೀರ ಸಂಪರ್ಕ ಅನುಭವಿಸಿದ್ದಾರೆ. ಇತ್ತೀಚೆಗೆ ಹುಡುಗ ಆಕೆಯ ಗೆಳತಿಗೆ ಹತ್ತಿರವಾಗಿದ್ದಾನೆ. ತನ್ನವಳಿಗೆ ಗೊತ್ತಿಲ್ಲದಂತೆ ಗೆಳತಿಯೊಂದಿಗೆ ಕಾಮಪ್ರೇಮದ ಸಂದೇಶಗಳನ್ನು ವಿನಿಮಯಿಸಿದ್ದಾನೆ. ಅವನನ್ನು ಮದುವೆಯಾಗುವ ಕನಸು ಕಟ್ಟಿದ್ದವಳು ಖಿನ್ನತೆಗೆ ಜಾರಿದ್ದಾಳೆ. ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಮುಂಚೆ ಯಾವುದಕ್ಕೂ ಇರಲಿ ಎಂದು ನನ್ನನ್ನು ಸಂಪರ್ಕಿಸಿದ್ದಾಳೆ.

ದೃಷ್ಟಾಂತ ಆರು: ಇವರಿಬ್ಬರೂ ವಿದೇಶದಲ್ಲಿ ಮೂರು ವರ್ಷಗಳಿಂದ ಒಟ್ಟಿಗೆ ವಾಸಿಸುತ್ತಿದ್ದಾರೆ. ಬರಬರುತ್ತ ಹತ್ತಿರವಾಗಿ ಮದುವೆಯಾಗಲು ನಿರ್ಧರಿಸಿದ್ದಾರೆ. ಭಾರತದಲ್ಲಿ ನಿಶ್ಚಿತಾರ್ಥ ಮುಗಿಸಿಗೊಂಡು ಹುಡುಗಿಯೊಬ್ಬಳೇ ವಿದೇಶಕ್ಕೆ ಮರಳಿದ್ದಾಳೆ. ಅಲ್ಲಿ ಒಂಟಿತನ ಸಹಿಸದೆ ಇನ್ನೊಬ್ಬನನ್ನು ಪ್ರೀತಿಸಿ ಅವನೊಡನೆ ಬಾಳುತ್ತಿದ್ದಾಳೆ. ಮರುವರ್ಷ ಮನಸ್ಸಿಲ್ಲದೆ ಬಂದು ಮದುವೆ ಮುಗಿಸಿಕೊಂಡು ಮರಳಿ, ಪುನಃ ಗೆಳೆಯನ 'ಸಹವಾಸಿ'ಯಾಗಿದ್ದಾಳೆ. ಸ್ವಲ್ಪ ಕಾಲದ ನಂತರ ಗಂಡ ವಿದೇಶದ ಇನ್ನೊಂದು ಊರಲ್ಲಿ ಕೆಲಸಕ್ಕೆ ಸೇರಿಕೊಂಡು ಇವಳನ್ನು ಜೊತೆಗಿರಲು ಆಹ್ವಾನಿಸಿದ್ದಾನೆ. ಅವಳು ಅದಕ್ಕೊಪ್ಪದೆ, ವಾರಾಂತ್ಯದಲ್ಲಿ ಮಾತ್ರ ಗಂಡನನ್ನು ಅರೆಮನಸ್ಸಿನಿಂದ ಕೂಡಿ ಮುಗಿಸಿ, ತನ್ನೂರಿಗೆ ಮರಳಿ ಉಳಿದೈದು ದಿನ ಗೆಳೆಯನೊಂದಿಗೆ ಬದುಕುತ್ತಿದ್ದಾಳೆ. ಕಂಗೆಟ್ಟ ಗಂಡ ಸಹಾಯಕ್ಕಾಗಿ ನನ್ನನ್ನು ಅಲ್ಲಿಗೇ ಕರೆಸಿಕೊಂಡಿದ್ದಾನೆ.

ಇಲ್ಲೇನು ಕಾಣುತ್ತಿದೆ? ಸಂಬಂಧಕ್ಕೆ ದ್ರೋಹವಾಗಲು ವಿವಾಹ ಆಗಿರಲೇಬೇಕೆಂದಿಲ್ಲ, ಬದ್ಧ ಸಂಬಂಧ (**committed relationship**) ಇದ್ದರೂ ಆಯಿತು. ಆದುದರಿಂದ, ವಿವಾಹವಾದ ಹಾಗೂ ಆಗಿರದ ಇಬ್ಬರಿಗೂ ಅನ್ವಯಿಸಲೆಂದು 'ವಿವಾಹ ಬಾಹಿರ ಸಂಬಂಧ'ದ ಬದಲು 'ಪರಸಂಬಂಧ' ಹಾಗೂ 'ಪರಸಂಗ' ಎಂಬ ಪದಗಳನ್ನು ಉಪಯೋಗಿಸುತ್ತಿದ್ದೇನೆ. (ಇದಕ್ಕೆ ಇಂಗ್ಲೀಷಿನಲ್ಲಿ **affair** ಎಂದು ಹೆಸರಿದೆ.)

ಪರಸಂಬಂಧಗಳು ಯಾಕಾಗುತ್ತವೆ? ಇವುಗಳ ಹಿನ್ನೆಲೆ ಏನು? ಹೀಗಾಗುವುದಕ್ಕೆ ವೈಜ್ಞಾನಿಕ ಕಾರಣ ಇವೆಯೆ? ಒಂದುಸಲ ಪರಸಂಬಂಧ ಆದರೆ ದಾಂಪತ್ಯ ಮುರಿದು ಬಿದ್ದಿತೆಂದೇ ಅರ್ಥವಲ್ಲವೆ? ಒಡೆದ ಕನ್ನಡಿಯ ರೀತಿ ಒಡೆದ ಸಂಸಾರ ಒಂದುಗೂಡಲು ಸಾಧ್ಯವಿಲ್ಲ, ಅಲ್ಲವೆ? ಒಂದುವೇಳೆ ಒಂದುಗೂಡಿದರೂ ಮುಂಚಿನ ಬಾಂಧವ್ಯದ ಸೊಗಡನ್ನು,ಸ್ಥಿರತೆಯನ್ನು ಮರಳಿ ತರಲು ಸಾಧ್ಯವೆ? ಇದರ ಚರ್ಚೆಗೆ ಮುಂದಿನ ಕೆಲವು ವಾರಗಳನ್ನು ಮೀಸಲಾಗಿಡೋಣ.

ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ.
ಲೈಂಗಿಕ ಸಮಸ್ಯೆಗಳಿಗೆ: 8050255229 (ಮಧ್ಯಾಹ್ನ 2ರಿಂದ 4ರ ತನಕ);
ದಾಂಪತ್ಯ ಸಮಸ್ಯೆಗಳಿಗೆ: 8494944888 (ಬೆಳಿಗ್ಗೆ 11ರಿಂದ ಸಂಜೆ 5ರ ತನಕ)
ಲೇಖಕರ ವಿಳಾಸ: www.medisex.org